No. of Printed Pages : **5**

# 1304 (NP)

*Register Number* | | | | | | | |

# Language — Part I — KANNADA — Paper I

Time Allowed : 2.30 Hours ] [ Maximum Marks : 90

**ಸೂಚನೆ :** (1) ಪ್ರಶ್ನೆಪತ್ರಿಕೆಯ ಮುದ್ರಣ ಸ್ಪಷ್ಟವಾಗಿದೆಯೇ ಎಂದು ಖಾತರಿಪಡಿಸಿಕೊಳ್ಳಿ. ಸ್ಪಷ್ಟತೆಯಲ್ಲಿ ಏನಾದರೂ ಕೊರತೆ ಇದ್ದಲ್ಲಿ ತಕ್ಷಣವೇ ಕೊಠಡಿ ಮೇಲ್ವಿಚಾರಕರಿಗೆ ತಿಳಿಸಿ.

(2) ಬರೆಯಲು ಮತ್ತು ಅಡ್ಡಗೆರೆ ಎಳೆಯಲು **ನೀಲಿ** ಅಥವಾ **ಕಪ್ಪು** ಶಾಹಿಯನ್ನು ಬಳಸಿರಿ ಹಾಗೂ ಆಕೃತಿಗಳನ್ನು ರಚಿಸಲು ಪೆನ್ಸಿಲ್ ಬಳಸಿರಿ.

**I.** **ಸರಿಯಾದ** ಉತ್ತರವನ್ನು ಆರಿಸಿ ಬರೆಯಿರಿ. **6x1=6**

Choose the **correct** answer.

**1.** ಪುಸ್ತಕ ಪ್ರಕಾಶನಕ್ಕೆ 'ಪದ್ಮಶ್ರೀ' ಪ್ರಶಸ್ತಿ ಪಡೆದ ಮೊದಲ ಕನ್ನಡಿಗ __________.

(ಅ) ಹಾ.ಮಾ. ನಾಯಕ (ಆ) ಕುವೆಂಪು

(ಇ) ಜಾನ್ ಹ್ಯಾಂಡ್ಸ್ (ಈ) ಜೆ.ಬಿ. ಜೋಷಿ

**2.** ಕರಿಯಪ್ಪನ ತಂದೆಯ ಹೆಸರು __________.

(ಅ) ಕುರಿಯಪ್ಪ (ಆ) ಹನುಮಪ್ಪ

(ಇ) ಮಾರಪ್ಪ (ಈ) ಈರಪ್ಪ

**3.** 'ವಿಜ್ಞಾನ ಮತ್ತು ಧರ್ಮ' ಪ್ರಬಂಧವನ್ನು ಬರೆದ ಲೇಖಕರು __________.

(ಅ) ಎಂ.ಎಸ್. ಸುಂಕಾಪುರ (ಆ) ದೇವುಡು ನರಸಿಂಹಶಾಸ್ತ್ರಿ

(ಇ) ಡಾ. ಜಿ. ರಾಮಕೃಷ್ಣ (ಈ) ಡಾ. ಡಿ.ಕೆ. ರಾಜೇಂದ್ರ

**4.** ಬಸವಣ್ಣನ ವಚನಗಳ ಅಂಕಿತನಾಮ __________.

(ಅ) ರಾಮನಾಥ (ಆ) ಕೂಡಲಸಂಗಮದೇವ

(ಇ) ಚನ್ನಮಲ್ಲಿಕಾರ್ಜುನ (ಈ) ಗುಹೇಶ್ವರ

**5.** 'ಭೂಸುರ' ಪದದ ಅರ್ಥ __________.

(ಅ) ವೈಶ್ಯ (ಆ) ಶೂದ್ರ (ಇ) ಬ್ರಾಹ್ಮಣ (ಈ) ಕ್ಷತ್ರಿಯ

**6.** 'ಫಣಿರಾಜಕೇತನ' ಎಂದರೆ ಯಾರು ?

(ಅ) ಧರ್ಮರಾಯ (ಆ) ದುರ್ಯೋಧನ

(ಇ) ಭೀಮ (ಈ) ಅರ್ಜುನ

II. **ಸರಿಯಾದ** ಉತ್ತರವನ್ನು ಆರಿಸಿ ಬರೆಯಿರಿ. 8x1=8

Choose the **correct** answer.

7. 'ಅಮೃತ' ಪದದ ತದ್ಭವ ರೂಪ __________.
   (ಅ) ಅಮರ್ದು (ಆ) ಆಮದು
   (ಇ) ಅಮರುತ (ಈ) ಮೃತ

8. 'ಹೆಬ್ಬಾವು' ಎಂಬುದು __________ ಸಮಾಸ.
   (ಅ) ದ್ವಿಗು ಸಮಾಸ (ಆ) ದ್ವಂದ್ವ ಸಮಾಸ
   (ಇ) ಕ್ರಿಯಾ ಸಮಾಸ (ಈ) ಕರ್ಮಧಾರೆಯ ಸಮಾಸ

9. 'ಪಂಡಿತೋತ್ತಮ' ಎಂಬುದು __________ ಸಂಧಿ.
   (ಅ) ಗುಣ ಸಂಧಿ (ಆ) ಆದೇಶ ಸಂಧಿ
   (ಇ) ಸವರ್ಣದೀರ್ಘ ಸಂಧಿ (ಈ) ಆಗಮ ಸಂಧಿ

10. ಮಾಸ್ತಿ ವೆಂಕಟೇಶ ಅಯ್ಯಂಗಾರ್‌ರವರ ಕಾವ್ಯನಾಮ __________.
    (ಅ) ತಿರುಮಲೇಶ (ಆ) ಸತೀಶ (ಇ) ಮಾದರಸ (ಈ) ಶ್ರೀನಿವಾಸ

11. 'ದುರ್ಗತಿ' ಪದದ ವಿರುದ್ಧಾರ್ಥಕ __________.
    (ಅ) ಗತಿ (ಆ) ಅದುರ್ಗತಿ
    (ಇ) ಅವನತಿ (ಈ) ಸದ್ಗತಿ

12. ಸುಬ್ಬಣ್ಣ ಮನೆಬಿಟ್ಟು ಹೋದಾಗ ಯಾರ ಬಳಿ ಸಾಲ ತೆಗೆದುಕೊಂಡು ಹೋದನು ?
    (ಅ) ನೀಲಾಸಾನಿ (ಆ) ಮಹಾರಾಜ
    (ಇ) ಲಲಿತ (ಈ) ಮಮತ

13. ಷಟ್ಪದಿ __________ ಸಾಲಿನ ಪದ್ಯ.
    (ಅ) 6 (ಆ) 7 (ಇ) 8 (ಈ) 9

14. 'ಬೆಂಗಳೂರು' ಎಂಬುದು __________.
    (ಅ) ಅನ್ವರ್ಥನಾಮ (ಆ) ಗುಣವಾಚಕ
    (ಇ) ರೂಢನಾಮ (ಈ) ಅಂಕಿತನಾಮ

III. (ಅ) **ಒಂದೆರಡು** ವಾಕ್ಯಗಳಲ್ಲಿ ಉತ್ತರಿಸಿ : (**ಮೂರಕ್ಕೆ ಮಾತ್ರ**) 3x2=6

Answer in **one** or **two** sentences : (**Any Three**)

15. ಹೋರಾಟಕ್ಕೆ ಜನರು ಹೇಗೆ ಹೊರಟರು ?

16. ಕಟಕವು ಯಾಕೆ ಸಂತಸದಿಂದ ನಲಿದಾಡಿತು ?

17. ಪ್ರಜೆಗಳು ಅಳುವುದಕ್ಕೆ ಪ್ರಾರಂಭಿಸಲು ಕಾರಣವೇನು ?

18. ಕರ್ಣನಿಗೆ ಸಾರಥಿಯಾಗಲು ಶಲ್ಯನು ಒಡ್ಡಿದ ಶರತ್ತೇನು ?

(ಆ) **ಒಂದೆರಡು** ವಾಕ್ಯಗಳಲ್ಲಿ ಉತ್ತರಿಸಿ : (**ಎರಡಕ್ಕೆ ಮಾತ್ರ**) 2x2=4

Answer in **one** or **two** sentences : (**Any two**)

19. ಹಿಂದಿನ ಕಾಲದಲ್ಲಿ ಹೆಣ್ಣನ್ನು ನೋಡಲು ಬಂದಾಗ ಗಂಡಿನವರು ನಡೆಸುತ್ತಿದ್ದ ಪರೀಕ್ಷೆಗಳೇನು ?

20. ಚಂದ್ರನ ಬಗ್ಗೆ ನಮಗೆ ದೊರೆತಿರುವ ಮಾಹಿತಿಗಳೇನು ?

21. ಕಬೀರದಾಸರು ಮನುಷ್ಯ ಸ್ವಭಾವವನ್ನು ಹೇಗೆ ವರ್ಣಿಸಿದ್ದಾರೆ ?

IV. ಸಂಕ್ಷಿಪ್ತವಾಗಿ ಉತ್ತರಿಸಿರಿ : (**ಏಳಕ್ಕೆ ಮಾತ್ರ**) 7x2=14

Short answers : (**Any seven**)

22. ಯಾವುದಾದರೊಂದನ್ನು ಉದಾಹರಣೆಸಹಿತ ವಿವರಿಸಿ.
(ಅ) ಆದೇಶ ಸಂಧಿ (ಆ) ಜಶ್ತ್ವ ಸಂಧಿ

23. ಯಾವುದಾದರೊಂದನ್ನು ಉದಾಹರಣೆಸಹಿತ ವಿವರಿಸಿ.
(ಅ) ಬಹುವ್ರೀಹಿ ಸಮಾಸ (ಆ) ತತ್ಪುರುಷ ಸಮಾಸ

24. ರೂಢನಾಮಗಳಿಗೆ ಎರಡು ಉದಾಹರಣೆಗಳನ್ನು ಕೊಡಿ.

25. ಉಪಮಾಲಂಕಾರಕ್ಕೆ ಎರಡು ಉದಾಹರಣೆಗಳನ್ನು ಕೊಡಿ.

26. ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿ ಹೆಸರಿಸಿ.
(ಅ) ಅಳತೆಗೋಲು (ಆ) ಯಜ್ಞೋಪಕರಣ

27. ಕೆಳಗಿನ ಪದಗಳ ವಿರುದ್ಧಾರ್ಥಕ ಬರೆಯಿರಿ.
(ಅ) ಜ್ಞಾನ (ಆ) ಪ್ರಾಕೃತಿಕ

28. ಕೆಳಗಿನ ಪದಗಳ ತತ್ಸಮ ರೂಪ ಬರೆಯಿರಿ.
(ಅ) ಬಣ್ಣ (ಆ) ಜಾಮ

29. ಯಾವುದಾದರೂ ಎರಡು ಸಮಾಸಗಳ ಹೆಸರನ್ನು ಬರೆಯಿರಿ.

30. ಯಾವುದಾದರೊಂದನ್ನು ಉದಾಹರಣೆಸಹಿತ ವಿವರಿಸಿ.

V. (ಅ) ಸಂಕ್ಷಿಪ್ತವಾಗಿ ಉತ್ತರಿಸಿ : (**ಎರಡಕ್ಕೆ ಮಾತ್ರ**) 2x4=8

Short answers : (**Any two**)

31. ಮೇಲುಕೋಟೆಯಲ್ಲಿ ಅಕ್ಕತಂಗಿಯರ ಕೊಳದ ಬಗ್ಗೆ ಇರುವ ಕಥೆಯೇನು ?

32. ದ್ರುಪದನು ಪಾಂಡವರನ್ನು ಸತ್ಕರಿಸಲು ಏನೇನು ಏರ್ಪಾಡುಗಳನ್ನು ಮಾಡಿದನು ?

33. ಸಂಸ್ಕೃತಿ ಎಂದರೇನು ? ಅದರ ಗುರುತುಗಳಾವುವು ?

(ಆ) ಸಂಕ್ಷಿಪ್ತವಾಗಿ ಉತ್ತರಿಸಿ : (**ಎರಡಕ್ಕೆ ಮಾತ್ರ**) 2x4=8

Short answers : (**Any two**)

34. ನಾಗಿಯು ಹೇಗೆ ಸಾವಿಗೆ ಗುರಿಯಾದಳು ?

35. ಮನೆವಂತ ಒಳ್ಳೆಯವನಾದರೂ ಕವಿ ಮನೆ ಬಿಡಲು ಕಾರಣವೇನು ?

36. ಭರತನು ಯುದ್ಧಕ್ಕೆ ಹೇಗೆ ಹೊರಟನು ?

VI. (ಅ) **ಯಾವುದಾದರೂ ಮೂರಕ್ಕೆ** ಮಾತ್ರ ಉತ್ತರಿಸಿರಿ : 3x4=12
Answer **any three** of the following :

37. ಯಾವುದಾದರೊಂದರ ಲಕ್ಷಣ ಬರೆದು ಉದಾಹರಣೆಸಹಿತ ವಿವರಿಸಿ.
(ಅ) ವಾರ್ಧಕ ಷಟ್ಪದಿ (ಆ) ಚಂಪಕಮಾಲಾವೃತ್ತ

38. ಕೆಳಗೆ ಕೊಟ್ಟಿರುವ ಆಂಗ್ಲ ಗಾದೆಗಳಿಗೆ ಸಮನಾದ ಕನ್ನಡ ಗಾದೆಗಳನ್ನು ಬರೆಯಿರಿ.
(ಅ) Hard work never fails (ಆ) Words Silver, Silence is Gold
(ಇ) Experience makes man perfect (ಈ) All glitters not gold

39. ಯಾವುದಾದರೊಂದರ ಲಕ್ಷಣ ಬರೆದು ಉದಾಹರಣೆ ನೀಡಿರಿ.
(ಅ) ಉಪಮಾಲಂಕಾರ (ಆ) ದೃಷ್ಟಾಂತಲಂಕಾರ

40. 'ತಾಯಿಯ ವಾತ್ಸಲ್ಯ' ವನ್ನು ಕುರಿತಂತೆ ಒಂದು ಕಿರುಕತೆಯನ್ನು ಬರೆಯಿರಿ.

**VII.** (ಅ) ವಿವರವಾಗಿ ಉತ್ತರಿಸಿರಿ : (**ಇಪ್ಪತ್ತು ಸಾಲುಗಳಿಗೆ ಮೀರದಂತೆ**) **2x6=12**

Answer in detail : (**Not more than twenty lines**)

**41.** ಗಂಗೆ–ಗೌರಿಗೂ ಆದ ಜಗಳವನ್ನು ವಿವರಿಸಿ.

**ಅಥವಾ**

ಕುಡುಕ ಕರಿಯಪ್ಪನ ದಾರುಣ ಕಥೆಯನ್ನು ವಿವರವಾಗಿ ಬರೆಯಿರಿ.

**42.** 'ನಾಗಿ' – ಕಥನ ಕವನದ ಸಾರಾಂಶವನ್ನು ಬರೆಯಿರಿ.

**ಅಥವಾ**

ಕೃಷ್ಣನು ತನ್ನ ನಿಜ ಸ್ವರೂಪವನ್ನು ತೋರಿಸಿದ ಸನ್ನಿವೇಶವನ್ನು ಚಿತ್ರಿಸಿರಿ.

(ಆ) ಪದ್ಯ ಪೂರ್ತಿಗೊಳಿಸಿ ಬರೆಯಿರಿ : **3+3=6**

Complete the poem :

**43.** (ಅ) ನೆಚ್ಚಿದೆನೆಂದರೆ ...............
............... ಕೂಡಲಸಂಗಮದೇವ.

(ಆ) ನಾವೆಲ್ಲರು ಒಂದೆ ಜಾತಿ ...............
............... ನಾವು ನವವಿಧಾತರು.

**VIII.** ಉಪಪಠ್ಯದಿಂದ ನೀಡಲಾದ ಪ್ರಶ್ನೆಗಳಿಗೆ **ಎರಡು** ಪುಟಗಳಿಗೆ **ಮೀರದಂತೆ** ಉತ್ತರ ಬರೆಯಿರಿ. **1x6=6**

Answer the following questions **not** more than **two** pages : (Non detail)

**44.** (ಅ) ಸುಬ್ಬಣ್ಣ ಹಾಗೂ ತಾಯಿಯ ಮಧ್ಯೆ ಮಾನಸಿಕ ಅಂತರವುಂಟಾಗಲು ಕಾರಣವೇನು ?

**ಅಥವಾ**

(ಆ) ಸುಬ್ಬಣ್ಣನ ತಾಯಿ–ತಂದೆಯರ ಅಂತ್ಯ ಹೇಗಾಯಿತು ? ತಿಳಿಸಿ.

- o O o -